ಶ್ರೀ ಆರ್. ಎಂ. ಪಾಟೀಲ್.—ಅದನ್ನು ವಿಚಾರಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಬಾವಿಗಳನ್ನು ತೆಗೆದುಕೊಳ್ಳುವಾಗ ಗ್ರಾಮಸ್ಥರು ಕಾಂಟ್ರಿಬ್ಯೂಷನ್ನು ನಾಲ್ಕನೆ ಒಂದು ಭಾಗದಷ್ಟು ಕೊಡಬೇಕೆಂದು ಇದೆ. ಇದನ್ನು ಜಿಲ್ಲಾಧಿಕಾರಿಗಳ ಡಿಸ್‌ಕ್ರಿಷನ್ನಿಗೆ ಬಿಡಬೇಕೆಂದು ಇದೆ. ಆದುದರಿಂದ ಈಗ ಶೇಕಡಾ 25ರಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕೆಂದಿರುವುದನ್ನು ಶೇಕಡಾ ಹತ್ತರಷ್ಟು ಎಂದು ಕಡಮೆ ಮಾಡುವುದಕ್ಕೆ ಸರಕಾರ ಆರ್ಡರ್ ಮಾಡುವುದಕ್ಕೆ ಆಗುವುದಿಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಅಂತಹ ಆರ್ಡರಾಗಿ ಬಹಳ ದಿವಸಗಳಾಗಿವೆ.

Sri N. O. SAMAJI (Marathi).—

Sri S. R. KANTHI (Minister for Education).—Sir, Sri Samaji wants to know how many wells did not get water ? He is under the wrong impression that these are irrigation wells.

Sri N. O. SAMAJI.—No, no. The answer is incomplete; it is wrong.

Mr. SPEAKER.—Wrong answers do not mean that the Chair can do anything. If wrong answers are given, the member knows the remedy; the Chair is not going to decide.

ಶ್ರೀ ಬಿ. ಬೈರಪ್ಪಾಜಿ.—ಹೊಸದಾಗಿ ಬಾವಿಗಳನ್ನು ಜನ ತೆಗೆದುಕೊಳ್ಳುವಾಗ ಶೇಕಡಾ ಐದರಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕು ಮತ್ತು ಎನ್. ಇ. ಎಸ್. ಹಾಗೂ ತಾಲ್ಲೂಕು ಬೋರ್ಡುಗಳ ಮೂಲಕ ಬಾವಿಗಳನ್ನು ಮಾಡುವಾಗ ಶೇಕಡಾ 25 ರಷ್ಟು ಮತ್ತು ಶೇಕಡಾ 50 ರಷ್ಟು ಕೊಡಬೇಕೆಂದು ನಿಗದಿಯಾಗಿದೆ. ಆದರೆ ಕೆಲವು ಕಡೆಗಳಲ್ಲಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಕಿಂದುಳಿದಿರುವ ಜನಗಳಿರುವ ಸಂದರ್ಭಗಳಲ್ಲಿ ಈ ರೀತಿ ಕಾಂಟ್ರಿಬ್ಯೂಷನ್ನು ಕೊಡುವುದರಲ್ಲಿ ಏನಾಯತಿ ಮಾಡಿಕೊಡುವುದು ಸರಕಾರದ ಕರ್ತವ್ಯವಲ್ಲವೇ ?

ಶ್ರೀ ಆರ್. ಎಂ. ಪಾಟೀಲ್.—ಇದು ಕರ್ತವ್ಯವಾಗುವುದಿಲ್ಲ. ಯಾವುದಾದರೂ ಒಂದು ಹಳ್ಳಿಯಲ್ಲಿ ತೊಂದರೆಯಾಗಿದೆ ಎಂದರೆ ಅದನ್ನು ಹೇಳಿ ಬಿಡಿಸಬಹುದು. ಸಾಮೂಹಿಕವಾಗಿ ಇದನ್ನು ಬಿಡಿಸಬೇಕೆಂದರೆ ಅದು ಸರಿಯಾಗಿರುವುದಿಲ್ಲ.

Road from Chikkundur to Yeslur.

*Q.—43. Sri S. A. VASANNA SHETTY (Sakaleshpur).—

Will the Government be pleased to state :

(*a*) the year in which the road from Chikkundur to Yeslur was sanctioned ;

(*b*) the amount spent on this road so far ;

(*c*) the action taken by them to complete the road ?

A.— Sri G. B. SHANKAR RAO (Parliamentary Secretary to the Minister for Public Works).—

(*a*) No estimate is sanctioned for forming the road fro Chikkundur to Yeslur.

(*b*) Does not arise in view of reply to clause (*a*).

(*c*) Does not arise in view of reply to clause (*a*)

ಶ್ರೀ ಎಸ್. ಎ. ವಾಸನ್ನ ಶೆಟ್ಟಿ.—ಉತ್ತರದಲ್ಲಿ ಎನ್ನೂರಿನಿಂದ ದೊಡ್ಡಕುಂದೂರಿಗೆ ಹೋಗುವ ರಸ್ತೆಗಳನ್ನು ಆರ್. ಸಿ. ರಸ್ತೆಗಳಾಗಿ ತೆಗೆದುಕೊಂಡಿದ್ದೀರಾ ಎಂದು ಇರಬೇಕಾಗಿತ್ತು. ಇಲ್ಲಿ ಕೊಟ್ಟಿರುವ ರಸ್ತೆ ಹೆಸರು ತಪ್ಪಾಗಿರಬಹುದು.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಸದಸ್ಯರು ಹೇಳುವಂತೆ ಎನ್ನೂರಿನಿಂದ ದೊಡ್ಡ ಕುಂದೂರಿಗೆ ಹೋಗುವ ರಸ್ತೆಯನ್ನೇ ತೆಗೆದುಕೊಂಡು ಅಂದಾಜು ಮಾಡಲಾಗಿದೆ.

ಶ್ರೀ ಎಸ್. ಎ. ವಾಸನ್ನ ಶೆಟ್ಟಿ.—ಇದರ ಅಂದಾಜು ಯಾವಾಗ ಮಂಜೂರಾಗಿದೆ ಮತ್ತು ಅದರಲ್ಲಿ ಎಷ್ಟು ಕೆಲಸಗಳಾಗಿವೆ ?

ಶ್ರೀ ಜಿ. ಬಿ. ಶಂಕರರಾವ್.—ಅಂದಾಜು ಮಂಜೂರಾಗಿದೆ. 21,780 ರೂಪಾಯಿಗಳಷ್ಟು ಹಣ ಸಹ ಒದಗಿಸಿದ್ದು ಈ ರಸ್ತೆ ಕೆಲಸ ಈಗ ಪೂರ್ತಿಯಾಗಿ ಆಗಿದೆ.

Loans Granted to Service Co-operative and Farming Societies.

*Q.—116. Sri ANDANAIAH (Kunigal).—

Will the Government be pleased to state:—

(*a*) the amount of Short Term, Middle Term and Produce loan granted to service co-operative and farming societies of Gottigere and Muganapura in Huthridurga Hobli and Kuppee of Amruthur Hobli in Kunigal Taluk so far ;

(*b*) the amount recovered so far from the said societies ;

(*c*) the amount misappropriated in the above societies ;

(*d*) the action they have taken against such societies who have misappropriated the amount ?

A.—(*a*) Sri K. PUTTASWAMY (Minister for Co-operation and Housing).—

Name of the Society	S.T.L.	M.T. Loan	Produce loan
Gottigere S.C.S. ...	23,300	4,400	1,474 83
Muganapura S.C.S. ...	19,800	10,100	65 19
Kuppe S.C.S. ...	13,100	28,350	5,668 19
Gottigere J.F.C.S. ...	...	4,000	Godown-*cum*-cattle shed loan 3,750 00
Muganapura J.F.C.S.	...	4,000	3,750 00
(*b*) —			
Gottigere S.C.S. ...	1,650	45	Produce loan 1,474 83
Muganapura S.C.S. ...	1,010	100	Nil
Kuppe S.C.S. ...	400	9,818	6,308 22
Gottigere Joint F.C.S.	...	266 67	Godown-*cum*-cattle shed loan 250 00
(*c*) —			
Gottigere S.C.S ...	...	4,236 52	

(*d*) Necessary complaint has been lodged with the police.